3. Rangappa, Jayamma		5 – 05
4. P. Kupparaju s/o Sanjeevaraju Narayanaraju	212	5 – 05
5. P. Kupparaju	213	5 – 00
6. R. Sreedar s/o K. Ramaraju	215	0 –13pk
7. Govt. Gomal	145	16 – 27
8. Krishnamaraju Reddamma w/o Ramaraju, Raju s/o Narayanaraju	130 (p)	5 – 00
9. Ramakka w/o Ramaraju	130 (p)	5 – 00
Vanajakshamma w/o late Chinnaiahraju, Jayamma	197	5 – 09
10. N. Thipparaju	198	5 – 02
11. M.S. Mosas Allfred Mosas Fedie Mosses	143	12 – 14
12. M. Surendranath, M. Dwarakanath, M. Ravindranath, Vasundaramma & Govt. Land, Mufathkavalu	146 (p)	13 – 33
13. S. Venkataraju, S. Narasaraju, S. Kupparaju, V. Narasaraju, Chinnapparaju	148	14 – 07
		0 – 17 pk
14. Mufathkavalu	149	20 – 31
Hoodi Village		129 – 32
		0 – 30 pk
Pattandur Agrahara		99 – 30
		2 – 04 pk
Total:		229 – 22
		2 – 34 pk
		232 – 16

ತುರುವೇಕೆರೆ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ

90 (415) ಶ್ರೀ. ಎಸ್. ರುದ್ರಪ್ಪ (ತುರುವೇಕೆರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲ್ಲೇನಹಳ್ಳಿ, ಗುಡ್ಡೇನಹಳ್ಳಿ, ಮಣಿಚಿಂಡೂರು ಪ್ರದೇಶಗಳಲ್ಲಿ ಏತ ನೀರಾವರಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಅ) ಇವುಗಳು ಕೆಟ್ಟು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಈ ಏತ ನೀರಾವರಿಯಿಂದ ಎಷ್ಟು ಎಕರೆಗಳಿಗೆ ನೀರನ್ನು ಉಪಯೋಗಿಸಬಹುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಮಣಿಚೆಂಡೂರು ಏತ ನೀರಾವರಿ ಯೋಜನೆ ಕಾರ್ಯ ನಿರ್ವಹಿಸುತ್ತಿದ್ದು ಕೆಟ್ಟುಹೋಗಿದ್ದ ಉಳಿದೆರಡು ಏತ ನೀರಾವರಿ ಯೋಜನೆಗಳನ್ನು ಈಗ ದುರಸ್ತಿಪಡಿಸಲಾಗಿದೆ.

ಇ) ಏತ ನೀರಾವರಿ ಯೋಜನೆ ಅಚ್ಚುಕಟ್ಟು

	(ಹೆಕ್ಟೇರುಗಳಲ್ಲಿ)
ಮಣಿಚೆಂಡೂರು	94
ಮಲ್ಲೇನಹಳ್ಳಿ	60
ಗುಡ್ಡೇನಹಳ್ಳಿ	57
ಒಟ್ಟು	211

ಮೈಸೂರು ಜಿಲ್ಲೆಯಾದ್ಯಂತ ಶಾಲಾ ಉಪಾಧ್ಯಾಯರುಗಳ ಖಾಲಿ ಇರುವ ಹುದ್ದೆಗಳ ಸಂಖ್ಯೆ

91 (454) ಶ್ರೀ ಕೆ.ಎಸ್. ಕಾಳಮರಿಗೌಡ, (ಪಿರಿಯಾಪಟ್ಟಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಾದ್ಯಂತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಮಂಜೂರಾಗಿದ್ದ ಹೆಚ್.ಪಿ.ಎಸ್. ಮತ್ತು ಎಲ್.ಪಿ.ಎಸ್. ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ಹಾಗೂ ಇನ್ನೂ ಖಾಲಿಯಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿಯನ್ನೊದಗಿಸುವುದು)

ಆ) ಖಾಲಿಯಿರುವ ಉಪಾಧ್ಯಾಯರುಗಳನ್ನು ಭರ್ತಿ ಮಾಡಲು ಸರ್ಕಾರವು ಯಾವಾಗ ಕ್ರಮ ಕೈಗೊಳ್ಳಲಿದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಮೈಸೂರು ಜಿಲ್ಲೆಯಾದ್ಯಂತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಮಂಜೂರಾದ ಹೆಚ್.ಪಿ.ಎಸ್. ಮತ್ತು ಎಲ್.ಪಿ.ಎಸ್. ಉಪಾಧ್ಯಾಯರುಗಳ ಸಂಖ್ಯೆ 7517. ಈ ಪೈಕಿ ಖಾಲಿ ಇರುವ ಉಪಾಧ್ಯಾಯರುಗಳ ಸಂಖ್ಯೆ 699. ತಾಲ್ಲೂಕುವಾರು ತಃಖ್ತೆ ಲಗತ್ತಿಸಿದೆ.

ಆ) ಮೈಸೂರು ಜಿಲ್ಲೆಯೂ ಸೇರಿದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ 1-3-90 ರಿಂದ 31-5-91ರವರೆಗೆ ಯೋಜನೆ ಹಾಗೂ ಯೋಜನೇತರ ಹುದ್ದೆಗಳು ಸೇರಿ ಒಟ್ಟು 13, 622 ಹುದ್ದೆಗಳು ಖಾಲಿ ಇದ್ದು ಇದರಲ್ಲಿ ಸರ್ಕಾರದ ಆದೇಶಗಳನ್ವಯ ಮೊದಲ ಹಂತವಾಗಿ 5,455 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಸರ್ಕಾರವು ತನ್ನ ಆದೇಶ ಸಂಖ್ಯೆ: ಇಡಿ 366 ಪಿಎಂಎಸ್ 92 ದಿನಾಂಕ 6-11-92ರಲ್ಲಿ ಇನ್ನೂ 1356 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ್ದು,